ವ್ಯವಸ್ಥಾಪಕ ನಿರ್ದೇಶಕರ ಕಛೇರಿ
ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ

ಕರ್ನಾಟಕ ಸರ್ಕಾರ

ನಂ.1-4, ಐ.ಟಿ. ಪಾರ್ಕ್, 1ನೇ ಮಹಡಿ
4ನೇ ಮುಖ್ಯರಸ್ತೆ, ರಾಜಾಜಿನಗರ ಕೈಗಾರಿಕಾ ಪ್ರದೇಶ
ರಾಜಾಜಿನಗರ, ಬೆಂಗಳೂರು – 560 010
ದೂರವಾಣಿ : 080 2311 8888 ಫ್ಯಾಕ್ಸ್: 080 23143130
ಇ-ಮೇಲ್ : rgrhcl@rediffmail.com

MD RGRHCL 01 PGT 08 2017-18 Date: 05.12.2017

ರಿಗೆ,
ರಾಜ್ಯದ ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ಜಿಲ್ಲಾ ಪಂಚಾಯತ್
ರಾಜ್ಯದ ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳು
ತಾಲ್ಲೂಕು ಪಂಚಾಯತ್

ಮಾನ್ಯರೆ,

ವಿಷಯ : ಪ್ರಧಾನ ಮಂತ್ರಿ ಆವಾಸ್-(ಗ್ರಾ) ಯೋಜನೆಯಡಿ ನಿರ್ಮಿಸುವ ಮನೆಗಳಿಗೆ Logo ಅಳವಡಿಸುವ ಬಗ್ಗೆ.

ಉಲ್ಲೇಖ : ಕೇಂದ್ರ ಸರ್ಕಾರದ ಪತ್ರ ಸಂಖ್ಯೆ: No.J-11014/01/2016-RH Date:28.11.2017

***********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಆವಾಸ್ ಯೋಜನೆ -(ಗ್ರಾ) ಅಡಿ ಕೇಂದ್ರ ಸರ್ಕಾರದಿಂದ ಗುರಿ ನೀಡಲಾಗುತ್ತಿದ್ದು, ಸದರಿ ಮನೆಗಳು ಅನುಷ್ಠಾನದಲ್ಲಿರುತ್ತವೆ. ಕೇಂದ್ರ ಸರ್ಕಾರದ ಮಾರ್ಗಸೂಚಿಯಲ್ಲಿ ಪೂರ್ಣಗೊಂಡ ಮನೆಗಳಿಗೆ Logo ಅಳವಡಿಸಲು ತಿಳಿಸಲಾಗಿರುತ್ತದೆ ಹಾಗೂ ಬಹಳಷ್ಟು ಪ್ರದೇಶಗಳಲ್ಲಿ ಉಲ್ಲೇಖ ಪತ್ರದಲ್ಲಿ ಸದರಿ ಯೋಜನೆಯಡಿ ನಿರ್ಮಿಸಲಾಗುತ್ತಿರುವ ಮನೆಗಳಲ್ಲಿ Logo ಮತ್ತಿತರ ವಿವರಗಳು ಇರುವುದಿಲ್ಲವಾದ್ದರಿಂದ ಪ್ರಧಾನ ಮಂತ್ರಿ ಆವಾಸ್-(ಗ್ರಾ) ಯೋಜನೆಯಡಿ ನಿರ್ಮಾಣವಾಗುವ ಮನೆಗಳ ಮೇಲೆ ಎಲ್ಲಾ ವಿವರಗಳನ್ನು ಕಡ್ಡಾಯವಾಗಿ ನಮೂದಿಸಲು ಕ್ರಮ ಕೈಗೊಳ್ಳಲು ಸೂಚಿಸಿರುತ್ತಾರೆ.

ಆದ್ದರಿಂದ ಪ್ರಧಾನ ಮಂತ್ರಿ ಆವಾಸ್ ಯೋಜನೆ – (ಗ್ರಾ) ಯಡಿ ಪೂರ್ಣಗೊಳ್ಳುವ ಮನೆಗಳಿಗೆ ಕಡ್ಡಾಯವಾಗಿ ಅನುಬಂಧ-1 ರಲ್ಲಿ ತಿಳಿಸಿರುವಂತೆ ವಿವರಗಳನ್ನು ಮನೆಯ ಮುಂಭಾಗದ ಗೋಡೆಯ ಮೇಲೆ ಸ್ಪಷ್ಟವಾಗಿ ಗೋಚರಿಸುವಂತೆ Logo ಅಳವಡಿಸಲು ಎಲ್ಲಾ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ಸೂಚನೆ ನೀಡಲು ಕೋರಿದೆ.

ಈಗಾಗಲೇ ಪೂರ್ಣಗೊಂಡ ಮನೆಗಳಿಗೆ ದಿನಾಂಕ 31.12.2017ರೊಳಗೆ ಕಡ್ಡಾಯವಾಗಿ Logo ಅಳವಡಿಸುವುದು ಮತ್ತು ಮುಂದೆ ಪೂರ್ಣಗೊಳ್ಳುವ ಎಲ್ಲಾ ಮನೆಗಳಿಗೆ ಅಳವಡಿಸಿ ನಂತರ ಜಿ.ಪಿ.ಎಸ್ ಮಾಡಲು ಕ್ರಮ ವಹಿಸುವುದು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ರವರು ಅನುಬಂಧ-1 ರಲ್ಲಿ ತಿಳಿಸಿರುವ ಮಾದರಿಯಲ್ಲಿ Logo ಅಳವಡಿಸಲು ಅನುಕೂಲವಾಗುವಂತೆ ಸರಿ ಯೋಜನೆಯಡಿ ಆಡಳಿತಾತ್ಮಕ ವೆಚ್ಚಕ್ಕಾಗಿ ಬಿಡುಗಡೆ ಮಾಡಲಾದ ಅನುದಾನದಲ್ಲಿ ಪ್ರಧಾನ ಮಂತ್ರಿ ಆವಾಸ್ ಯೋಜನೆ-ಗ್ರಾ ಅಡಿ ಗುರಿ ನೀಡಲಾದ ಎಲ್ಲಾ ಗ್ರಾಮ ಪಂಚಾಯತಿಗಳಿಗೆ Stencil (ಅಚ್ಚು) ಅನ್ನು ತಯಾರಿಸಿ ನೀಡಲು ಕ್ರಮ ಕೈಗೊಳ್ಳಲು ಕೋರಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

(ವಿ.ಅನ್ಬುಕುಮಾರ್)
ವ್ಯವಸ್ಥಾಪಕ ನಿರ್ದೇಶಕರು

(ಮು.ತಿ.ನೋ.)

ಅನುಬಂಧ–1

प्रधान मंत्री
आवास योजना-ग्रामीण
Pradhan Mantri Awaas Yojana-Gramin

ಫಲಾನುಭವಿ ಹೆಸರು:

ತಂದೆ/ಗಂಡನ ಹೆಸರು:

ವರ್ಗ:

ಶ್ರೇಣಿ:

ಗ್ರಾಮ ಪಂಚಾಯತ್ ಹೆಸರು:

ಸರ್ಕಾರದಿಂದ ಸಹಾಯ ಧನ:
ಫಲಾನುಭವಿ ಸ್ವಂತ ವಂತಿಕೆ:

ಒಟ್ಟು: